




# ದೇವರು ಕೊಟ್ಟಿಹನು




-ಚಂದ್ರಶೇಖರ ಶಿ. ಹಿರೇಮಠ



ಕಿವಿಯನು ದೇವರು ಕೊಟ್ಟಿಹನು
ಕೇಳಲು ಒಳ್ಳೆಯ ಸುದ್ದಿಯನು ।
ಕಣ್ಣನು ದೇವರು ಕೊಟ್ಟಿಹನು
ನೋಡಲು ಒಳ್ಳೆಯ ದೃಶ್ಯವನು ।

ಮೂಗನು ದೇವರು ಕೊಟ್ಟಿಹನು
ಸವಿಯಲು ಒಳ್ಳೆಯ ಗಾಳಿಯನು ।
ನಾಲಿಗೆ ದೇವರು ಕೊಟ್ಟಿಹನು
ನುಡಿಯಲು ಒಳ್ಳೆಯ ನುಡಿಗಳನು ।



ಕಾಲನು ದೇವರು ಕೊಟ್ಟಿಹನು
ನಡೆಯಲು ಒಳ್ಳೆಯ ಹಾದಿಯನು ।
ಕೈಗಳು ದೇವರು ಕೊಟ್ಟಿಹನು
ಮಾಡಲು ಒಳ್ಳೆಯ ಕೆಲಸವನು ।

ಬುದ್ಧಿ ದೇವರು ಕೊಟ್ಟಿಹನು
ಕಲಿಯಲು ಒಳ್ಳೆಯ ನಡತೆಯನು ।
ಎಲ್ಲವು ದೇವರು ಕೊಟ್ಟಿಹನು
ಬೆಳಗಲು ನಿಮ್ಮಯ ಬಾಳ್ವೆಯನು ।

Let your life shine




Scanned with CamScanner



# ಅಭ್ಯಾಸ

**I. ಪದಗಳ ಅರ್ಥ ತಿಳಿಯಿರಿ.**

1. ಸುದ್ದಿ = ಸಮಾಚಾರ (News)
2. ದೃಶ್ಯ = ನೋಟ (Sight)
3. ನುಡಿ = ಮಾತು (Speech)
4. ಹಾದಿ = ದಾರಿ (Way)
5. ನಡತೆ = ಗುಣ (Character)
6. ಬಾಳ್ವೆ = ಬದುಕು, ಜೀವನ (Life)
7. ಬೆಳಗಲು = ಪ್ರಕಾಶಿಸುವಂತೆ ಮಾಡು (Shine)



**II. ಪದ್ಯಭಾಗಗಳನ್ನು ಪೂರ್ಣಗೊಳಿಸಿ.**

ಕಿವಿಯನು ______________________

______________________________

______________________________

________________ ಒಳ್ಳೆಯ ದೃಶ್ಯವನು ।



ಬುದ್ಧಿ ______________________

______________________________

______________________________

________________ ಬಾಳ್ವೆಯನು ।

**III. ಈ ಪದ್ಯದಲ್ಲಿ ಬಂದಿರುವ ಸಜಾತೀಯ ಒತ್ತಕ್ಷರಗಳು, ಮತ್ತು ವಿಜಾತೀಯ ಒತ್ತಕ್ಷರ ಪದಗಳನ್ನು ಆರಿಸಿ ಬರೆಯಿರಿ.**

**ಉದಾ :** ಕೊಟ್ಟಿಹನು, ........................, ........................, ........................,

........................, ........................, ........................, ........................,

(**ಸಜಾತೀಯ ಒತ್ತಕ್ಷರಗಳು** – ಒಂದು ವ್ಯಂಜನಾಕ್ಷರಕ್ಕೆ ಅದೇ ವ್ಯಂಜನಾಕ್ಷರವು ಸೇರಿದಾಗ ಸಜಾತೀಯ ಒತ್ತಕ್ಷರವಾಗುತ್ತದೆ.

**ಉದಾ :** ಅಕ್ಕ, ದೊಣ್ಣೆ, ಅನ್ನ.

**ವಿಜಾತೀಯ ಒತ್ತಕ್ಷರಗಳು** – ಒಂದು ವ್ಯಂಜನಾಕ್ಷರಕ್ಕೆ ಬೇರೊಂದು ವ್ಯಂಜನಾಕ್ಷರವು ಸೇರಿದಾಗ ವಿಜಾತೀಯ ಒತ್ತಕ್ಷರವಾಗುತ್ತದೆ. ಉದಾ : ಚಕ್ರ, ದೃಶ್ಯ, ಸ್ವಚ್ಛ.)



Scanned with CamScanner

## VI. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

1. ದೇವರು ಕಿವಿಯನ್ನು ಏಕೆ ಕೊಟ್ಟಿರುವನು?

_______________________________________________

2. ಒಳ್ಳೆಯ ದೃಶ್ಯವನ್ನು ಯಾವುದರಿಂದ ನೋಡಬೇಕು?

_______________________________________________

3. ಮೂಗಿನಿಂದ ನಾವು ಏನನ್ನು ಸವಿಯುತ್ತೇವೆ?

_______________________________________________

4. ದೇವರು ಎಂತಹ ಕೆಲಸಗಳನ್ನು ಮಾಡಲು ಕೈಗಳನ್ನು ಕೊಟ್ಟಿಹನು?

_______________________________________________

5. ದೇವರು ಏನನ್ನು ಕಲಿಯಲು ಬುದ್ಧಿ ಕೊಟ್ಟಿಹನು?

_______________________________________________

## V. ಬಿಟ್ಟ ಸ್ಥಳಗಳಲ್ಲಿ ಸರಿಯಾದ ಪದಗಳನ್ನು ಬರೆಯಿರಿ.

1. ನಾಲಿಗೆ ............................................ ಕೊಟ್ಟಿಹನು.
2. ನಡೆಯಲು ಒಳ್ಳೆಯ ............................................
3. 'ದೇವರು ಕೊಟ್ಟಿಹನು' ಕವಿತೆಯನ್ನು ಬರೆದ ಕವಿ ಹೆಸರು ............................................

## VI. ಕೊಟ್ಟಿರುವ ಪದಗಳಿಗೆ ಆಂಗ್ಲ (ಇಂಗ್ಲೀಷ್) ಪದಗಳನ್ನು ಬರೆಯಿರಿ.

| | | |
|---|---|---|
| 1. ಕಿವಿ | : | |
| 2. ಕಣ್ಣು | : | |
| 3. ಮೂಗು | : | |
| 4. ನಾಲಿಗೆ | : | |
| 5. ಕಾಲು | : | |
| 6. ಕೈ | : | |



Scanned with CamScanner